ಪುರಸಭೆಗಳ ಕರಾ – ಕರಣಿ ಮೊತ್ತದ ಬಗ್ಗೆ

೧೯೧೮ ಶ್ರೀ ಸಿ. ಎಂ. ಉದಾಸಿ (ಹಾನಗಲ್).—ಮಾನ್ಯ ಕಾನೂನು, ಸಂಸದೀಯ ವ್ಯವಹಾರ ನಗರಾಭಿವೃದ್ಧಿ ಹಾಗೂ ಆಹಾರ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದ ಎಲ್ಲಾ ನಗರಸಭೆ / ಪುರಸಭೆಗಳಿಗೆ ಎಲ್ಲಾ ಮೂಲಗಳಿಂದ ಬರುವ ಆದಾಯದ ಮೊತ್ತವೆಷ್ಟು ?

ಆ) ರಾಜ್ಯದ ನಗರ / ಪುರಸಭೆಗಳಿಗೆ ಸರ್ಕಾರದಿಂದ ಕೊಡುವ ಆಕ್ಟ್ರಾಯ್ ಗ್ರಾಂಟ್ ಎಷ್ಟು ?

ಇ) ಆಕ್ಟ್ರಾಯ್ ಅನುದಾನ ಪಡೆಯದೇ ಇರುವ ಪುರಸಭೆಗಳೆಷ್ಟು ?

ಈ) ರಾಜ್ಯದ ಎಲ್ಲಾ ನಗರ ಹಾಗೂ ಪುರಸಭೆಗಳ ನೌಕರರಿಗೆ ವಾರ್ಷಿಕ ಸಂಬಳದ ಮೊತ್ತವೆಷ್ಟು ?

ಶ್ರೀ ಎ. ಲಕ್ಷ್ಮೀಸಾಗರ್ (ಕಾನೂನು, ಸಂಸದೀಯ ವ್ಯವಹಾರ, ನಗರಾಭಿವೃದ್ಧಿ ಹಾಗೂ ಆಹಾರ ಮಂತ್ರಿಗಳು)—

ಅ) ರೂ. ೫೦,೦೭,೬೮,೬೪೪–೦೦

ಆ) ರೂ. ೧೩.೭೩ ಕೋಟಿ

ಇ) ಇಲ್ಲ

ಈ) ರೂ. ೨೪,೨೬,೫೭,೦೦೦–೦೦

ನಗರಸಭೆಗಳ ನೌಕರರಿಗೆ ಸಂಬಳ ಕೊಡುವ ಬಗ್ಗೆ

೧೯೧೭ ಶ್ರೀ ಸಿ. ಎಂ. ಉದಾಸಿ, (ಹಾನಗಲ್).—ಮಾನ್ಯ ಕಾನೂನು, ಸಂಸದೀಯ ವ್ಯವಹಾರ, ನಗರಾಭಿವೃದ್ಧಿ ಹಾಗೂ ಆಹಾರ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರಾಜ್ಯದ ಎಲ್ಲಾ ನಗರ / ಪುರಸಭೆಗೆ ನೌಕರರನ್ನು ನೇಮಿಸಿಕೊಳ್ಳುವ ಅಧಿಕಾರ ಸರ್ಕಾರಕ್ಕಿರುವಾಗ ಅವರಿಗೆ ವೇತನವನ್ನು ಸಹಾ ಸರ್ಕಾರದವರು ಕೊಡುವುದು ಸೂಕ್ತವಲ್ಲವೇ ?

ಆ) ಸರ್ಕಾರದಿಂದ ಆಯಾ ನಗರ/ಪುರಸಭೆಗಳಿಗೆ ವೇತನ ಅನುದಾನ ಬಿಡುಗಡೆ ಮಾಡಬೇಕೆಂದು ರಾಜ್ಯ ನಗರಾಧ್ಯಕ್ಷರ ಸಂಘದ ಬೇಡಿಕೆ ಸರ್ಕಾರದವರು ಈಡೇರಿಸುತ್ತಾರೆಯೇ ? ಅಥವಾ ಖಜಾನೆಯಿಂದಲೇ ಪೌರಸೇವಾ ನೌಕರರಿಗೆ ವೇತನ ಕೊಡುವ ವಿಧಾನ ಮಾಡಲಾಗುವುದೇ ?

ಶ್ರೀ ಎ. ಲಕ್ಷ್ಮೀಸಾಗರ್ (ಕಾನೂನು, ಸಂಸದೀಯ ವ್ಯವಹಾರ, ನಗರಾಭಿವೃದ್ಧಿ ಹಾಗೂ ಆಹಾರ ಮಂತ್ರಿಗಳು).—

ಅ) ಪುರ / ನಗರಸಭೆಗಳಲ್ಲಿ ಭಿನ್ನಭಿನ್ನ ಹುದ್ದೆಗಳು ಇವೆ. ಆ ಹುದ್ದೆಗಳಲ್ಲಿ ಕೆಲವನ್ನು ತುಂಬಲು ಮುನಿಸಿಪಾಲಿಟಿಗೂ ಇನ್ನೂ ಕೆಲವನ್ನು ತುಂಬಲು ವಿಭಾಗಾಧಿಕಾರಿಗಳಿಗೂ ಮತ್ತು ಕೆಲವನ್ನು ತುಂಬಲು ಜಿಲ್ಲಾಧಿಕಾರಿಗಳಿಗೂ ಮತ್ತು ಸರ್ಕಾರಕ್ಕೂ ಅಧಿಕಾರ ಇದೆ. ಈ ಎಲ್ಲ ನೇಮಕಗಳನ್ನೂ ಪುರ / ನಗರಸಭೆಗಳ ವತಿಯಿಂದ ಬೇರೆ ಬೇರೆ ಅಧಿಕಾರಿಗಳು ಮಾಡುತ್ತಾರೆ. ಅಂದ ಮಾತ್ರಕ್ಕೆ ಪುರ / ನಗರಸಭೆಯು ನೌಕರರ ಸಂಬಳವನ್ನು ಸರ್ಕಾರದವರೇ ಕೊಡಬೇಕೆಂಬ ವಾದ ಸಮಂಜಸವಲ್ಲ.

ಆ) ಪುರ / ನಗರಸಭೆಗಳ ನೌಕರರ ಬೇಡಿಕೆಯ ತಾತ್ಪರ್ಯವೇನೆಂದರೆ ಅವರಿಗೆ ಪ್ರತಿ ತಿಂಗಳು ಬಿಟ್ಟುಬಿಡದೆ ಸಂಬಳವನ್ನು ಕೊಡುವ ವ್ಯವಸ್ಥೆ ಮಾಡಬೇಕೆಂಬುದು. ಈ ವಿಷಯವನ್ನು ಪರಿಶೀಲಿಸಲು ಸರ್ಕಾರದವರು ಒಂದು ಸಮಿತಿಯನ್ನು ನೇಮಿಸಬೇಕೆಂದು ತೀರ್ಮಾನಿಸಿದ್ದಾರೆ. ಆ ಸಮಿತಿಯಲ್ಲಿ ಪುರ / ನಗರಸಭೆಗಳ ಅಧ್ಯಕ್ಷರಿಗೂ ಹಾಗೂ ನೌಕರರ ಪ್ರತಿನಿಧಿಗಳಿಗೂ ಪ್ರಾತಿನಿಧ್ಯವನ್ನು ಕೊಡಲು ಉದ್ದೇಶಿಸಿದೆ. ಆ ಸಮಿತಿಯು ಈ ವಿಷಯವನ್ನು ಪರಿಶೀಲಿಸಿ ವರದಿ ಕೊಟ್ಟ ನಂತರ ಮುಂದಿನ ಕ್ರಮ ಕೈಗೊಳ್ಳಲಾಗುವುದು.